# 1

# "ಶೂನ್ಯವಾದದ್ದರಿಂದ ಯಾವುದೂ ಬರುವದಿಲ್ಲ"

ಮಳೆಗೆ ತಂದೆಯುಂಟೋ?
ಮಂಜಿನ ಹನಿಗಳನ್ನು ಪಡೆದವನು ಯಾರು?
ಹಿಮದ ಗಡ್ಡೆಯು ಯಾರ ಗರ್ಭದಿಂದ ಹೊರಟಿತು?
ಆಕಾಶದ ಇಬ್ಬನಿಯನ್ನು ಯಾರು ಹೆತ್ತರು?
(ಯೋಬ 38:28, 29).

ದೇವತ್ವದ ಅಸ್ತಿತ್ವಕ್ಕಾಗಿ ಎಲ್ಲಾ ಕಾರಣಗಳಿಗಿಂತ ಅತೀ ಹೆಚ್ಚು ಸ್ಪಷ್ಟವಾದದ್ದು ಪ್ರತಿಯೊಂದು ಪರಿಣಾಮಕ್ಕೂ ಒಂದು ಕಾರಣವಿರತಕ್ಕದ್ದು, ಅದು ತಾರ್ಕಿಕವಾಗಿ ಅದು ಕಾರಣವಾಗದ ಕಾರಣಕ್ಕೆ[1] ಹಿಂದಿರುಗಿ ನಡಿಸುತ್ತದೆ.

## ವಾದವು ಹೇಳಲ್ಪಟ್ಟದ್ದು

"ದೇವರುಗಳಲ್ಲಿ" ನಂಬಿಕೆಗಾಗಿ ಗ್ರೀಕ ತತ್ವ ಜ್ಞಾನಿ ಪ್ಲಾಟೋ ಮೂರು ಕಾರಣಗಳನ್ನು ಹೇಳಿದನು, ಆದರೆ "ಮೊದಲನೆಯದಾಗಿ" ಅವನು ಯಾದಿ ಮಾಡಿದ್ದು "ಭೂಮಿ ಮತ್ತು ಸೂರ್ಯ ಮತ್ತು ನಕ್ಷತ್ರಗಳು ಹಾಗೂ ವಿಶ್ವದ" ಅಸ್ತಿತ್ವವಾಗಿತ್ತು. "ದೇವರುಗಳು" "ಸೂರ್ಯ, ಚಂದ್ರ ಮತ್ತು ನಕ್ಷತ್ರಗಳನ್ನು ಉತ್ಪಾದಿಸಿದವು" ಎಂದು ಅವನು ಹೇಳಿದನು.[2] ಜೋಸೆಫ್ ಎಡ್ಡಿಸನ್ ಎಂಬವನು ಕೀರ್ತನೆ 19ನ್ನು ಸಂಗೀತಕ್ಕೆ ಅಳವಡಿಸಿದಾಗ, ಅವನು ಪರಲೋಕದ ಜೀವಿಗಳೆಲ್ಲವೂ "ಮಹಿಮೆಯುಳ್ಳ ಸ್ವರವನ್ನು ನುಡಿಯುವುದನ್ನು" ಕೇಳಿಸಿಕೊಂಡನು:

ಅವು ಹೊಳೆಯುತ್ತಿರುವಂತೆ ಹಾಡುತ್ತಾ ಸದಾಕಾಲ,
ನಮ್ಮನ್ನು ಮಾಡಿದ ಕೈ ದೈವೀಯವಾಗಿರುವುದು.[3]

ಚಂದ್ರನು ಯಾವುದರಿಂದ ಮಾಡಲ್ಪಟ್ಟನು? ಯು.ಎಸ್. ಗಗನ ಯಾತ್ರಿಗಳಾದ ನೀಲ ಆರ್ಮಸ್ಟ್ರಾಂಗ್ ಮತ್ತು ಎಡ್ವಿನ್ ಆಲ್ಡರಿನ್ ಅವರು 2 ಜುಲೈ 1969ರಂದು 48.5 ಪೌಂಡುಗಳಷ್ಟು ಚಂದ್ರನಲ್ಲಿಯ ವಸ್ತುಗಳನ್ನು ಶೇಕರಿಸಿದರು. ಅವು (1) ಚೆನ್ನಾಗಿ ಕೆಂಪಾಗಿ ಸುಟ್ಟ ಅಗ್ನಿಮಯ ಕಲ್ಲುಗಳನ್ನೂ, (2) ಮಧ್ಯಮವಾಗಿ ಸುಟ್ಟ ಅಗ್ನಿಮಯ ಕಲ್ಲುಗಳನ್ನೂ, (3) ಬ್ರೆಕ್ಸಿಯಾ (ಒಟ್ಟಾಗಿ ಕೂಡಿಸಲ್ಪಟ್ಟ ಮೂಲೆಗಳುಳ್ಳ ಕಲ್ಲುಗಳನ್ನು)

ಮತ್ತು, (4) ಸೂಕ್ಷವಾದವು (ಚಿಕ್ಕ ವಸ್ತುಗಳನ್ನು ಒಳಗೊಂಡಿದ್ದವು). ಈ ಮಾದರಿಗಳ ಪೃಥಕ್ಕರಣವು ಭೂಮಿಯ ಹದಿನಾರು ಮೂಲವಸ್ತುಗಳ ಇರುವಿಕೆಯನ್ನು ಪ್ರಕಟಿಸಿತು. ಅವುಗಳಲ್ಲಿ ಸಿಲಿಕೊನ, ಅಲ್ಯುಮಿನಿಯಮ್, ಕಬ್ಬಿಣ, ಮ್ಯಾಗ್ನೆಶಿಯಮ್, ಟಿಟಾನಿಯಮ್, ಕ್ಯಾಲ್ಸಿಯಮ್, ಸೋಡಿಯಮ್ ಮತ್ತು ಪೊಟ್ಯಾಸಿಯಮ್ ಪ್ರಮುಖವಾದವುಗಳಾಗಿದ್ದವು. ಚಂದ್ರನು ನಿಜವಾದ ಭೌತವಸ್ತುವಿನಿಂದ ಮಾಡಲ್ಪಟ್ಟಿದ್ದು, ನಮ್ಮ ಭೂಮಿಗಿಂತ ಬಹಳ ಭಿನ್ನವಾಗಿರುವದಿಲ್ಲ, ಭೌತ ದ್ರವ್ಯವು ಕಾರಣವಿಲ್ಲದೇ ಸುಮ್ಮನೇ ಸಂಭವಿಸಲಿಲ್ಲ ಎಂದು ವಿವೇಕವು ಹೇಳುತ್ತದೆ. ಶೂನ್ಯವಾದ್ದರಿಂದ ಯಾವುದೂ ಬರುವದಿಲ್ಲ,

ವಿವೇಚನೆಯುಳ್ಳ ಜನರಿಗೆ, ಸಿ ಆಫ್ ಟ್ರ್ಯಾಂಕ್ವಿಲಿಟಿಯಲ್ಲಿ ಈಗಲ್ ಇಳಿದ ಚಂದ್ರನ ಶಿಲೆಯ ಗಟ್ಟಿತನವು ವಾಸ್ತವಿಕವಾದದ್ದಾಗಿದೆ ಮತ್ತು ವಾಸ್ತವಿಕತೆಯು ಕಾರಣವನ್ನು ಕೇಳುತ್ತದೆ. ಚಂದ್ರನು ಗಟ್ಟಿಯಾದ ಸ್ಥಳವನ್ನು ಒಳಗೊಂಡಿದ್ದರೆ, ಭೂಮಿಗೆ ತರುವಂಥ ಗಟ್ಟಿಯಾದ ನಿಜವಾದ ಭೌತ ವಸ್ತುಗಳನ್ನೊಳಗೊಂಡಿದ್ದರೆ, ಚಂದ್ರನ ನಿರ್ಮಾಣಿಕನನ್ನು ಕಲ್ಪಿಸಬಹುದು. ಗಗನ ಯಾತ್ರಿಗಳಿಂದ ಹೊಂದಿಕೊಂಡ ಪುರಾವೆಯು ಚಂದ್ರನ ನಿರ್ಮಾಣಿಕನು ಹೇಗೆ ಮತ್ತು ಯಾಕೆ ಅಸ್ತಿತ್ವದಲ್ಲಿ ಬಂದನು ಎಂಬುದಕ್ಕೆ ಸಾಕ್ಷಿಕೊಡುವದಿಲ್ಲ. ನಿರ್ಮಾಣಿಕರ ಅನಂತತೆಯನ್ನು ಒಬ್ಬನು ಕಲ್ಪಿಸಿಕೊಳ್ಳದಿದ್ದರೆ, ಈ ರೀತಿಯಲ್ಲಿ ಎಲ್ಲಿಯೋ ಮಾಡಲ್ಪಡದೇ ಇದ್ದ ನಿರ್ಮಾಣಿಕನು ಇದ್ದನೆಂದು ಹೇಳ ತಕ್ಕದ್ದಾಗಿದೆ. ಆದುದರಿಂದ ವಿವೇಚನೆಯು ಮಾಡಲ್ಪಡದ ನಿರ್ಮಾಣಿಕನಿಗಾಗಿ ಕರೆಯುತ್ತದೆ.

ನಿರ್ಮಾಣಿಕನು ಮಾಡಲ್ಪಡದವನಾಗಿದ್ದರೆ ಆತನು ಯಾವಾಗಲೂ ಇದ್ದಾತನಾಗಿರುತ್ತಾನೆ, ಅಂದರೆ ಆತನು ನಿತ್ಯನಾಗಿರುತ್ತಾನೆ - ಮತ್ತು ಆತನು ನಿರ್ಮಾಣಿಕನಾಗಿರಲು ತನ್ನ ಸಾಮರ್ಥ್ಯವನ್ನು ಸ್ವೀಕರಿಸದಿದ್ದರೆ, ಆತನು ಸ್ವತಂತ್ರನೂ ಎಲ್ಲವನ್ನು ಒಳಗೊಂಡವನೂ ಆಗಿರತಕ್ಕದ್ದು. ಹಾಗಾದರೆ, ಚಂದ್ರನ ಅಸ್ತಿತ್ವವೇ ಸ್ವತಂತ್ರನಾದ, ನಿತ್ಯನಾದ ನಿರ್ಮಾಣಿಕನ ಬಗ್ಗೆ ದೃಢಪಡಿಸುತ್ತದೆ.

ಅನೇಕ ಜನರು ಚಂದ್ರನಂಥ ವಸ್ತುಗಳನ್ನು ನಿಸರ್ಗದ ಮನೆಯ ಭಾಗದಂತೆ ಯೋಚಿಸಿದ್ದಾರೆ. ಪ್ರತಿಯೊಂದು ಮನೆಯು ಯಾರಿಂದಲೋ ಕಟ್ಟಲ್ಪಟ್ಟಂತೆ ಎಲ್ಲಾ ಸಂಗತಿಗಳನ್ನು ಕಟ್ಟಿದಾತನು ದೇವರು ಎಂದು ಅವರು ವಿವೇಚಿಸುತ್ತಾರೆ (ನೋಡಿರಿ ಇಬ್ರಿಯ 3:4). ಕಟ್ಟುವಾತನು ಅಲ್ಲಿರುವನೆಂದು ಒಬ್ಬನು ನೋಡಬೇಕಾಗಿರುವದಿಲ್ಲ, ಯಾಕಂದರೆ ಆತನ ಕೈಕೆಲಸವೇ ಆತನ ಸಾನ್ನಿಧ್ಯವನ್ನು ತಿಳಿಯುವಂತೆ ಮಾಡಿದೆ. ಜಗತ್ತಿನ ಸೃಷ್ಟಿಯು, ನಿಸರ್ಗದ ಮನೆಯು, "ಮಾಡಲ್ಪಟ್ಟದ್ದರಿಂದ" ತಿಳಿಯಲ್ಪಟ್ಟಿದೆ, ಮತ್ತು ಅವಿಶ್ವಾಸಿಗಳನ್ನು ಪ್ರತಿಪಾದಿಸಿ ಕೊಳ್ಳದವರನ್ನಾಗಿಯೂ ಉತ್ತರವಿಲ್ಲದವರನ್ನಾಗಿಯೂ ಮಾಡಿದೆ (ನೋಡಿರಿ ರೋಮಾಪುರ 1:19, 20).

ಚಂದ್ರನ ಅಸ್ತಿತ್ವವು ಅವಶ್ಯಕವಾದ ನಿರ್ಮಾಣಿಕನನ್ನು ತೋರಿಸುವುದಲ್ಲದೇ, ಆಕಾಶದಲ್ಲಿ ಅದರ ಚಲನೆಯು ಅವಶ್ಯಕವಾದ ಚಲಿಸುವಾತನನ್ನೂ ಸೂಚಿಸುತ್ತದೆ. ಚಲಿಸುವಂತೆ ಮಾಡುವವರ ಅಪರಿಮಿತ ಸರಣಿಯ ಬಗ್ಗೆ ಒಬ್ಬನು ಚರ್ಚಿಸದಿದ್ದರೆ, ಆಗ ಚಲನೆಯನ್ನು ಪ್ರಾರಂಭಿಸಲು ಸಹಾಯದ ಅಗತ್ಯತೆಯಿಲ್ಲದ ಚಲಿಸುವಾತನು ಇದ್ದನು. ಸಂಗತಿಗಳನ್ನು ಚಲಿಸಲಿಕ್ಕೆ ತನ್ನಲ್ಲಿ ಬಲವನ್ನು ಹೊಂದಿದಾತನಾಗಿದ್ದನು. ಅದಲ್ಲದೇ, ಚಲನೆಯನ್ನು ಪ್ರಾರಂಭಿಸಲಿಕ್ಕೆ ಅದು ಏನೂ ಇಲ್ಲದ್ದರಿಂದ ಬಲವುಳ್ಳದ್ದಾಗಿದ್ದರೆ ಆತನು ನಿತ್ಯನಾದ ಚಲಿಸುವಂತೆ ಮಾಡುವಾತನಾಗಿದ್ದಾನೆ. ಹಾಗೆ ತಾವೇ ಒಳಗೊಂಡ ನಿತ್ಯ ಚಲಿಸುವಂತೆ ಮಾಡುವವರು ಎಷ್ಟು ಸಂಖ್ಯೆಯಲ್ಲಿ ಇರುವರೆಂಬುದನ್ನು ತರ್ಕಶಾಸ್ತ್ರವು ಒಪ್ಪಿಕೊಳ್ಳುವದಿಲ್ಲ, ಅದರೆ ಅದು ಕನಿಷ್ಠಪಕ್ಷ ಒಬ್ಬಾತನ ಕಡೆಗೆ ತೋರಿಸುತ್ತದೆ.

ಇದಲ್ಲದೇ, ವಿಶ್ವದ ಸ್ಪಷ್ಟವಾದ ಐಕ್ಯತೆಯು ಒಬ್ಬನು ಮಾತ್ರವೇ ಇದ್ದನು ಎಂಬುದನ್ನು ಸೂಚಿಸುತ್ತದೆ. "ಕೆಟ್ಟದ್ದಾಗಿ ನಡಿಸಿಕೊಳ್ಳುವದನ್ನು ಜಗತ್ತು ನಿರಾಕರಿಸುತ್ತದೆ; ಕೆಡುಕು ಅನೇಕರ ಆಳಿಕೆಯಾಗಿದೆ; ಒಬ್ಬನೇ ಆಳುವಾತನು ಇರಲಿ."[4]

## ವಾದವು ಅಲ್ಲಗಳೆಯಲ್ಪಟ್ಟದ್ದು

"ಏನೂ ಇಲ್ಲದ್ದರಿಂದ ಯಾವದೂ ಬರುವದಿಲ್ಲ" ಎಂಬ ಪುರಾತನ ಹೇಳಿಕೆಯು - ಭೂಮಿ ಮತ್ತು ಮನುಷ್ಯನು ಸೃಷ್ಟಿಸಲ್ಪಡುವದಕ್ಕೆ ನಡಿಸುವಂಥದ್ದು ಎಷ್ಟೇ ನಂಬಿಕೆ ಹುಟ್ಟಿಸುವಂಥದ್ದಾಗಿದ್ದರೂ, ಕೆಲವು ಪಂಡಿತರು ಭೂಮಿಯನ್ನೂ ಮನುಷ್ಯನನ್ನೂ ಯಾವುದೂ ಸೃಷ್ಟಿಸಲಿಲ್ಲ ಎಂದು ಹೇಳುವದನ್ನು ಹೆಚ್ಚಾಗಿ ಬಯಸುತ್ತಾರೆ. ಫೆಸರ್ ಫ್ರೆಡ್ ಹೊಯ್ಲ್, ಒಬ್ಬ ವಿಜ್ಞಾನಿ ಮತ್ತು ಕೇಂಬ್ರಿಜ್‌ದ ಸೇಂಟ್ ಜಾನ್ಸ್ ಕಾಲೇಜಿನ, ಪ್ರಾಧ್ಯಾಪಕರು, ವಿಶ್ವದ ತಾಯಿಯ (ಹೈಡ್ರೋಜನ್ ಗ್ಯಾಸ್) ಮೂಲವನ್ನು ನಿತ್ಯವಾದ ಅವಶ್ಯಕತೆ ಎಂದು ಕರೆದು, ಏನೂ ಅಲ್ಲವೆಂದು ಒಪ್ಪಿಕೊಂಡರು.[5] ಇನ್ನೊಬ್ಬ ಪಂಡಿತ ತತ್ವಜ್ಞಾನಿಯಾದ ಆರ್ಥರ್ ಶೊಪೆನ್‌ಹೌರ (1788-1860), ಅವರು "ಕುರುಡು ಚಿತ್ತವು" ವಿಶ್ವವನ್ನು ಶಾಶ್ವತವಾಗಿ ಸೃಷ್ಟಿಸುವಂತೆ ಮಾತಾಡಿದರು,[6] ಮತ್ತು ಹೆನ್ರಿ ಬೆರ್ಗಸನ್ (1859-1941) ಅವರು "ಅರುಹು ಇಲ್ಲದ ಬದ್ಧಿಶಕ್ತಿಯಿಂದ" ಸೃಜನಾತ್ಮಕ ಉತ್ಕ್ರಾಂತಿಯ ಬಗ್ಗೆ ಮಾತಾಡಿದರು.[7] ಅನಂತರದ ಮಾತು "ಅರುಹುವುಳ್ಳ ಮನಸಿಲ್ಲದಿರುವಿಕೆ" ಯಂತೆ ವಿರುದ್ಧವಾದದ್ದಾಗಿದೆ; ಜನರು ತಮ್ಮ ಮನಸ್ಸುಗಳಲ್ಲಿ ದೇವರು ಇರುವದನ್ನು ತಿರಸ್ಕರಿಸುವಾಗ ಎಷ್ಟರವರೆಗೆ ಹೋಗುವರು ಎಂಬುದನ್ನು ಅದರ ಉಪಯೋಗವು ತೋರಿಸುತ್ತದೆ.

ಸ್ಕೋಟಿಶ್ ತತ್ವಜ್ಞಾನಿ ಡೇವಿಡ್ ಹ್ಯೂಮ (1711-76) "ಏನೂ ಇಲ್ಲದ್ದರಿಂದ ಯಾವದೂ ಬರುವದಿಲ್ಲ" ಎಂಬ ಸಿದ್ಧಾಂತದಿಂದ ಬಲಪಡೆಯಲು ಕೈಲಾದಷ್ಟು ಪ್ರಯತ್ನ ಮಾಡಿದನು. ನಾಸ್ತಿಕನಾಗಿದ್ದ ಹ್ಯೂಮನು ಸಿದ್ಧಾಂತದ ಒತ್ತಡದ ಬಗ್ಗೆ ಕುತೂಹಲದಿಂದ ಅರುಹುವುಳ್ಳವನಾಗಿದ್ದನು; ವಿಶ್ವಕ್ಕೆ ಕಾರಣವಿದೆ ಎಂದು ಅದು ತೋರಿಸುವದರಿಂದ ಅದು ಅವನನ್ನು ಪ್ರಚೋದಿಸಿತು. "ಪುರಾತನ ತತ್ವ ಜ್ಞಾನದ ಭಕ್ತಿಹೀನ ಸೂತ್ರದಂತೆ" ಅದನ್ನು ತಿರಸ್ಕರಿಸಿ, ಅಂಥ ಕಾರಣದಿಂದ, "ಯಾವುದನ್ನಾದರೂ ಉತ್ಪಾದಿಸಲು ಯಾವುದಾದರೂ ಕಾಣಿಸಿಕೊಳ್ಳಬಹುದು" - "ಅತೀ ಭ್ರಾಂತಿಯ ಕಲ್ಪನೆಯು ಕೊಡಬಹುದಾದ ಯಾವುದನ್ನಾದರು ಉತ್ಪಾದಿಸಬಹುದು ಎಂಬುದನ್ನು ಒಪ್ಪಿಕೊಂಡನು."[8] ಹಾಗಿದ್ದರೂ, ಕೆಲವು ಸಮಯಗಳಲ್ಲಿ ಹ್ಯೂಮನು, "ಹೀಗೆ ಎಲ್ಲಾ ವಿಜ್ಞಾನಗಳು ಪರಿಜ್ಞಾನವಿಲ್ಲದೆ ಒಂದು ಪ್ರಥಮ ಬುದ್ಧಿವಂತ ಕರ್ತೃವನ್ನು ಒಪ್ಪಿಕೊಳ್ಳಲು ನಮ್ಮನ್ನು ಹೆಚ್ಚಾಗಿ ನಡಿಸುತ್ತದೆ" ಎಂದು ಹೇಳಿ, ಹೆಚ್ಚು ಯೋಗ್ಯನಾಗಿದ್ದನು.[9]

ಅಬರ್ದೀನದ ಮಾರಿಶಲ್ ಕಾಲೇಜಿನ, ಪ್ರೊಫೆಸರ್ ಜೇಮ್ಸ್ ಬಿಯಾಟ್ಟೀ ಎಂಬವರು, 1770ರಲ್ಲಿ ಹ್ಯೂಮನ್ ವಿವೇಚನೆಯನ್ನು ಖಂಡಿಸಿ ಬರೆದನು: "ಆದುದರಿಂದ, ಈ ಸಿದ್ಧಾಂತವು (ಅಸ್ತಿತ್ವದಲ್ಲಿ ಇರಲು ಪ್ರಾರಂಭಿಸುವ ಯಾವುದೇ ಆಗಲಿ, ಯಾವುದೋ ಕಾರಣದಿಂದ ಹೊರಟು ಬರುತ್ತದೆ) ಸಾಮಾನ್ಯ ಅರ್ಥದ ತತ್ವಗಳಲ್ಲಿ ಒಂದಾಗಿದೆ. ಇದನ್ನು ಪ್ರತಿಯೊಂದು ವಿವೇಚಿಸುವ ಮನಸ್ಸು ಸತ್ಯವೆಂದು ಒಪ್ಪಿಕೊಳ್ಳತಕ್ಕದ್ದು; ಅದು ರುಜುವಾತು ಪಡಿಸಲ್ಪಡುವದರ ಕಾರಣದಿಂದಲ್ಲ, ಆದರೆ ರುಜುವಾತು ಇಲ್ಲದೇ ನಿಸರ್ಗದ ನಿಯಮವು ನಾವು ನಂಬುವಂತೆ ತೀರ್ಮಾನಿಸುವದರಿಂದ ಮತ್ತು ಅದಕ್ಕೆ ವಿರುದ್ಧವಾಗಿ ಅಸ್ಪಷ್ಟವಾಗಿ, ಅಸಾಧ್ಯವಾದದ್ದಾಗಿ ಮತ್ತು ಅಗ್ರಾಹ್ಯವಾಗಿ ಕಾಣುವಂತೆ

ಮಾಡುವದರಿಂದ ಹಾಗೇ ಒಪ್ಪಿಕೊಳ್ಳುತ್ತೇವೆ."[10] ತಪ್ಪು ಕಂಡು ಹಿಡಿಯುವವನ ಅತೀ ಬಲವಾದ ಪ್ರಯತ್ನದ ನಂತರವೂ, ಒಂದು ಮನೆಯು ಮನುಷ್ಯನಿಂದ ಮಾಡಲ್ಪಟ್ಟದ್ದಾಗಿದ್ದರೂ ಇಲ್ಲವೇ ಸೃಷ್ಟಿ ಅತೀ ದೊಡ್ಡ ಮನೆಯಾಗಿದ್ದರೂ ಅದಕ್ಕೊಬ್ಬ ಕಟ್ಟುವವನು ಇದ್ದಾನೆ ಎಂಬುದು ಸ್ಪಷ್ಟವಾಗಿದೆ.

ಶುದ್ಧ ವಿವೇಕವು ಮಾಡುವಂಥದ್ದರ ಮತ್ತು ಅನುಭವವು ಪ್ರದರ್ಶಿಸುವದರ ಮಧ್ಯದಲ್ಲಿ ತನ್ನ ಭಿನ್ನತೆ ಮಾಡಿದ್ದಕ್ಕಾಗಿ ಡೇವಿಡ್ ಹ್ಯೂಮ ಪ್ರಸಿದ್ಧನಾಗಿದ್ದಾನೆ. ಒಂದು ಚಂಡು ಎರಡನೆ ಚಂಡನ್ನು ಹೊಡೆಯುವಾಗ, ಎರಡನೆಯ ಚಂಡು ಚಲಿಸುತ್ತದೆ. ಅಂಥ ಸಂಗತಿಯು ಸಂಭವಿಸುವದನ್ನು ಆದಾಮನು ಎಂದೂ ನೋಡಿರದಿದ್ದರೆ, ವಿವೇಚನೆಯಿಂದ ಮಾತ್ರವೇ, ಕಾರ್ಯಕಾರಣವನ್ನು ಕೇವಲ ವಿವರಣೆಯಂತೆ ದೃಢಪಡಿಸುತ್ತಿರಲಿಲ್ಲ ಎಂದು ಹ್ಯೂಮನು ಒಪ್ಪಿಕೊಂಡನು. ಅಸ್ತಿತ್ವದಲ್ಲಿರಲು ಪ್ರಾರಂಭಿಸುವಂಥದ್ದು ಯಾವುದೋ ಕಾರಣದಿಂದ ಮುಂದುವರಿಯುವುದು ಎಂಬ ಹೇಳಿಕೆಯನ್ನು ತೋರಿಸಲು ಹ್ಯೂಮನು ನಿರ್ಧರಿಸಿಕೊಂಡಿದ್ದನು.

ಹ್ಯೂಮ ಹೀಗೆ ಹೇಳಿದನು, "ಯಾವುದೇ ಕಾರಣದಿಂದ ಯಾವುದೇ ಪರಿಣಾಮವನ್ನು ಮನಸ್ಸು ಯಾವಾಗಲೂ ಊಹಿಸಬಹುದು, ಮತ್ತು ಯಾವುದೇ ಘಟನೆಯು ಇನ್ನೊಂದನ್ನು ಅನುಸರಿಸಬಹುದು; ಆಧ್ಯಾತ್ಮಿಕ ವಿಚಾರದ ಅರ್ಥದಲ್ಲಿಯಾದರೂ ನಾವು ಊಹಿಸುವಂಥದ್ದು ಸಾಧ್ಯವಾಗಿರುತ್ತದೆ."[11] "ಆದುದರಿಂದ, ಅಸ್ತಿತ್ವದ ಪ್ರಾರಂಭದ್ದರಿಂದ ಕಾರಣದ ವಿಚಾರವನ್ನು ಬೇರ್ಪಡಿಸುವುದು ಕಲ್ಪನೆಗಾಗಿ ಸರಳವಾಗಿ ಸಾಧ್ಯವಿದೆ" ಎಂದೂ ಅವನು ಹೇಳಿದನು.[12]

ತಾತ್ವಿಕವಾಗಿ, ಎರಡನೆಯ ಚಂಡು, ಪರಿಣಾಮದ ಕ್ಷಣದಲ್ಲಿ, ಮೊದಲನೆಯ ಚೆಂಡಿನಿಂದ ಒತ್ತಡವು ಹಾಕಲ್ಪಡದೆ ತಾನೇ ಚಲಿಸುವುದು ಎಂಬುದನ್ನು ಕಲ್ಪಿಸುವುದು ಸಾಧ್ಯವಿದೆ; ಆದರೆ ಅಂಥ ಕಲ್ಪನೆಯು ಅರ್ಥರಹಿತವಾದದ್ದಾಗಿದೆ. ಅದರಂತೆಯೇ, ತಾತ್ವಿಕವಾಗಿ, ವಿಶ್ವವು ಕಾರಣವಿಲ್ಲದ್ದಾಗಿದೆ ಎಂದು ಒಬ್ಬನು ಕಲ್ಪಿಸಬಹುದು, ಆದರೆ ಆಲೋಚನೆಯು ಅರ್ಥವಿಲ್ಲದ್ದಾಗಿದೆ. ಹ್ಯೂಮನ ತಾಂತ್ರಿಕವಾದವು ಹುಚ್ಚು ಮಾತಾಗಿದೆ. ಅದು ದೇವರ ಅಸ್ತಿತ್ವಕ್ಕಾಗಿ ಕಾರ್ಯಕಾರಣ ಸಂಬಂಧದ ವಾದದ ಬಲವನ್ನು ಮಾತ್ರ ರುಜುವಾತು ಪಡಿಸುತ್ತದೆ. ಅವನ ತರ್ಕವು ಪೌಲನು ಎಚ್ಚರಿಸಿದ ನಿಜ ಜೀವನದ ಒಂದು ಉದಾಹರಣೆಯನ್ನು ಒಪ್ಪಿಕೊಳ್ಳುತ್ತದೆ: "ಕ್ರಿಸ್ತನನ್ನು ಅನುಸರಿಸದೆ ಮನುಷ್ಯರ ಸಂಪ್ರದಾಯಗಳನ್ನೂ ಪ್ರಾಪಂಚಿಕ ಬಾಲಬೋಧನೆಯನ್ನೂ ಅನುಸರಿಸುವವರು. ನಿಮ್ಮಲ್ಲಿ ಬಂದು ಮೋಸವಾದ ನಿರರ್ಥಕ ತತ್ವಜ್ಞಾನ ಬೋಧನೆಯಿಂದ ನಿಮ್ಮ ಮನಸ್ಸನ್ನು ಕೆಡಿಸಿ ನಿಮ್ಮನ್ನು ವಶಮಾಡಿಕೊಂಡಾರು, ಎಚ್ಚರಿಕೆಯಾಗಿರ್ರಿ" (ಕೊಲೊಸ್ಸೆ 2:8ಎ).

ಅದೇ ರೀತಿಯ ತರ್ಕವು ದೇವರ ಅಸ್ತಿತ್ವಕ್ಕೆ ರುಜುವಾತನ್ನು ಕೊಡುವದಿಲ್ಲ ಯಾಕಂದರೆ ಆತನ ಅಸ್ತಿತ್ವದಲ್ಲಿ ಇಲ್ಲದೇ ಇರುವಂಥದ್ದನ್ನು ರುಜುವಾತು ಪಡಿಸುವದನ್ನು ಎಂದೆಂದಿಗೂ ಪ್ರತಿಬಂಧಿಸುತ್ತದೆ ಯಾಕಂದರೆ ಆತನ ಅಸ್ತಿತ್ವವು ಗ್ರಹಿಸಲ್ಪಡುವಂಥದ್ದಾಗಿದೆ. ಹೀಗೆ ತರ್ಕಿಸುವುದು ಒಂದು ಬಿಕ್ಕಟ್ಟಾಗಿರುತ್ತದೆ. ಒಂದೇ ಪರಿಹಾರವು ಕಾರಣ ಮತ್ತು ಪರಿಣಾಮದ ನಿಯಮಕ್ಕೆ ಹಿಂದಿರುಗುವಂಥದ್ದಾಗಿದೆ. ಈ ನಿಯಮವು "ಮಾನವ ಜ್ಞಾನದ ದೊಡ್ಡ ಭಾಗವನ್ನು ರೂಪಿಸುವಂಥ, ಮತ್ತು ಮಾನವನ ಎಲ್ಲಾ ಕೃತ್ಯ ಮತ್ತು ನಡವಳಿಕೆಗೆ ಮೂಲವಾಗಿರುವಂಥ, ನೈತಿಕ ವಿವೇಚನಾ ಶಕ್ತಿಯ ಅಸ್ತಿವಾರವಾಗಿದೆ."[13] ಹೀಗೆ, ಬೌದ್ಧಿಕ, ವಿಭಜನಾತ್ಮಕ ಮತ್ತು ಪಕ್ಷಪಾತದ ಮನಸ್ಸು ಮಾಡಬಹುದಾದಂಥದ್ದು, ದೇವರ ಅಸ್ತಿತ್ವಕ್ಕಾಗಿ ಕಾರ್ಯಕಾರಣವು

ದುರ್ಬಲಗೊಳಿಸದಂಥದ್ದಾಗಿರುತ್ತದೆ.

ಪ್ಲ್ಯಾಟೋನು ಪ್ರಥಮ ಚಲಿಸುವಾತನ ಬಗ್ಗೆ ಬರೆದನು. ಅವನು ಸ್ವಯಂಚಾಲಿಕ ಚಲನೆಗೆ ಬರುವ ಮೊದಲು ಆಕಸ್ಮಿಕವಾಗಿ ಸಂಭವಿಸಿದ ಒಂಭತ್ತು ರೀತಿಯ ಚಲನೆಗಳನ್ನು ಯಾದಿ ಮಾಡಿದನು. "ಇತರ ಎಲ್ಲವುಗಳಿಗಿಂತ ಇವು ಹತ್ತು ಸಾವಿರ ಪಟ್ಟು ಹೆಚ್ಚು ಉತ್ತಮವಾದವುಗಳಾಗಿವೆ" ಎಂದು ಹೊಗಳಿದನು ಯಾಕಂದರೆ - "ಸ್ವತಃ ಚಲಿಸುವುದಾಗಿರುವದರಿಂದ" - ಅದು ಎಲ್ಲಾ "ಚಲಿಸುವಿಕೆಯ ಮೂಲವಾಗಿದ್ದಿರಬೇಕು."[14]

"ಸಾವಿರಗಳ ಮೇಲೆ ಹತ್ತು ಸಾವಿರ ವಸ್ತುಗಳು" ಅನಂತರದಲ್ಲಿ ಚಲನೆಯಲ್ಲಿ ಇಡಲ್ಪಟ್ಟರೂ, ಚಲನೆಯ "ಎಲ್ಲಾ ಪ್ರಾರಂಭದಂತೆ" "ಸ್ವಯಂ ಚಾಲನೆಯ ತತ್ವದ" ಅಗತ್ಯತೆಯನ್ನು ಇಟ್ಟುಕೊಂಡನು. ಚಲಿಸುವಂತೆ ಮಾಡುವವರ ಅಪರಿಮಿತ ಪ್ರತಿಗಮನವನ್ನು ತಾರ್ಕಿಕವಾಗಿ ಕಾಪಾಡಿಕೊಳ್ಳಲಿಕ್ಕಾಗದು ಎಂಬುದನ್ನು ಅವನು ತೋರಿಸಿದನು (ಅಂದರೆ, ಚಲನೆಗಳ ಸರಣಿಯ ಮುಖಾಂತರ ಒಬ್ಬನು ಹಿಂದಕ್ಕೆ ನೋಡುವಂತೆ, ಅವನು ಕೊನೆಗೆ ಇತರ ಬೇರೆ ಯಾವುದರಿಂದ ಚಲಿಸಲ್ಪಡದೆ, ಯಾವುದಾದರೂ ಮೊದಲು ಚಲಿಸುವಂತೆ ಮಾಡಬೇಕೆಂಬುದನ್ನು ಅಂತಿಮವಾಗಿ ಕಂಡುಕೊಳ್ಳುತ್ತಾನೆ). ಅರಿಸ್ಟೋಟಲನು ಅದೇ ತರ್ಕವನ್ನು ಪುನರಾವರ್ತಿಸಿದನು; ಪ್ರಥಮವಾಗಿ ಚಲಿಸುವಂತೆ ಮಾಡಿದಾತನು ನಿತ್ಯನಾದವನಾಗಿರಬೇಕು ಎಂಬುದನ್ನು ತೋರಿಸಿದನು. "ಯಾವುದೂ ನಿತ್ಯವಾದದ್ದಾಗಿರದಿದ್ದರೆ, ಆಗ ಯಾವುದೂ ಬರುವಂಥದ್ದಾಗಿರುದಿಲ್ಲ; ಯಾಕಂದರೆ ಆಗುವಂಥ ಪ್ರಗತಿಯನ್ನು ಹೊಂದಿಕೊಳ್ಳುವಂಥ ಯಾವುದಾದರೂ ಇರಬೇಕಾಗುತ್ತದೆ. ಅಂದರೆ, ಯಾವುದರಿಂದ ಅದಾಗುವಂಥದ್ದು ಮತ್ತು ಈ ಸರಣಿಯ ಕೊನೆಯ ಸದಸ್ಯನು ಉತ್ಪತ್ತಿ ಮಾಡಲ್ಪಡದಾತನಾಗಿರತಕ್ಕದ್ದು, ಯಾಕಂದರೆ ಸರಣಿಯು ಯಾವುದಾದರು ಒಂದರಿಂದ ಪ್ರಾರಂಭವಾಗತಕ್ಕದ್ದು, ಯಾಕಂದರೆ ಯಾವುದೂ ಏನೂ ಇಲ್ಲದ್ದರಿಂದ ಬರಲಾರದು."[15]

ತಾನು "ಸಂಶೋಧಕನು" ಎಂದು ಹೇಳಿಕೊಂಡ ತನ್ನ ವಾದದ ಬಗ್ಗೆ ಹ್ಯೂಮನು ಸಮೃದ್ಧವಾಗಿ ಬರೆದ ನಂತರ,[16] ಆ ಮೇಲೆ ಅವನು ತನ್ನ ಸ್ಥಾನವನ್ನು ಬದಲಾಯಿಸಿದನೆಂದು ತೋರುತ್ತದೆ. ಅವನು ಹೀಗೆ ಬರೆದನು,

> ನಾವು ಒಂದು ಮನೆಯನ್ನು ನೋಡಿದರೆ, ... ಅತಿದೊಡ್ಡ ನಿಶ್ಚಿತತೆಯಿಂದ, ಅದಕ್ಕೆ ಒಬ್ಬ ಶಿಲ್ಪ ಇಲ್ಲವೇ ಕಟ್ಟುವವನು ಇದ್ದನೆಂದು ತೀರ್ಮಾನಿಸುತ್ತೇವೆ; ... ಆದರೆ ನಿಶ್ಚಯವಾಗಿ ಈ ವಿಶ್ವವು ಒಂದು ಮನೆಗೆ ಹೋಲಿಕೆಯಂತೆ ಇದೆ ಎಂದು ನೀವು ಒಪ್ಪಿಕೊಳ್ಳುವದಿಲ್ಲ. ಅದೇ ನಿಶ್ಚಿತತೆಯೊಂದಿಗೆ ಈ ರೀತಿಯ ಕಾರಣವನ್ನೆ ಕಲ್ಪಿಸಿಕೊಳ್ಳುತ್ತೇವೆ. ಇಲ್ಲವೇ ಆ ಸಾಮ್ಯವು ಇಲ್ಲಿ ಇಡೀ ಯಾವುದದ್ದೂ ಪರಿಪೂರ್ಣವಾದದ್ದೂ ಆಗುವುದು. ಹೋಲಿಕೆಯಿಲ್ಲದ್ದು ಬಹಳ ಸ್ಪಷ್ಟವಾಗಿದೆ. ಅಂಥದ್ದೇ ಕಾರಣವನ್ನು ಕುರಿತು ಅದೊಂದು ಊಹನೆ, ಕಲ್ಪನೆ, ಭಾವನೆಯೆಂದು ನಟಿಸಬಹುದು, ...[17]

ಹೀಗಿದ್ದರೂ, "ಅಂಥ ಜೀವಿಯು ಅಗತ್ಯವಾಗಿ ಅಸ್ತಿತ್ವದಲ್ಲಿರುವನೆಂದು" ಒಬ್ಬನು ಹೇಳಲಾರನೆಂದು ಹೇಳುವದರಿಂದ ತಾನು ಬದಲಾಯಿಸಿ ಹೇಳಿದ್ದನ್ನು ಸಮರ್ಥಿಸಿಕೊಂಡನು, "ಎಲ್ಲಾ ಸಾಧ್ಯವಾದ ಪರಿಣಾಮಗಳ ಕಾರಣದಂತೆ ಕಾರ್ಯಮಾಡಲು ಸಮರ್ಥವಾಗಿರುವ ಜೀವಿಯ ಅಸ್ತಿತ್ವವನ್ನು" ಒಬ್ಬನು ಒಪ್ಪಿಕೊಂಡರೆ ಆಗ ಅದು ಕಾರಣ ಬಾಧ್ಯತೆಗಳಿಂದ ಎಲ್ಲಾ ವಾದವಾಗುವುದು, ಜರ್ಮನ್ ತತ್ವಜ್ಞಾನಿ ಇಮ್ಮಾನುವೇಲ್ ಕಾಂಟ (1724-1804) ಜಗತ್ತು, "ಸರ್ವ ಸಾಮರ್ಥ್ಯ ಅಗತ್ಯ

ಕಾರಣದಿಂದ" ಎದ್ದು ಬಂದಿತೆಂದು ಒಪ್ಪಿಕೊಂಡನು, ಆದರೆ "ತನ್ನಷ್ಟಕ್ಕೆ ತಾನೇ ಇರುವ ಅಸ್ತಿತ್ವದ ಅಗತ್ಯತೆಯ ಬಗ್ಗೆ" ಮಾತಾಡುವಲ್ಲಿ ಭಿನ್ನತೆಯುಳ್ಳವನಾಗಿದ್ದನು.[18]

"ಎಲ್ಲಾ ಸಾಮರ್ಥ್ಯದ ಅಗತ್ಯ ಕಾರಣವು," "ತನ್ನಷ್ಟಕ್ಕೆ ತಾನೇ ಇರುವ ಅಸ್ತಿತ್ವವು" ಆಗಿರದಿದ್ದರೆ, ಆಗ ಅದು "ತನ್ನಷ್ಟಕ್ಕೆ ತಾನೇ" ಅಗತ್ಯವಾಗಿರುವ ಇತರ ಯಾವುದೋ ಅಸ್ತಿತ್ವದಿಂದ ಹೊರಟು ಬಂದಿರುವಂತೆ ತೋರುತ್ತದೆ. ಹೀಗೆ ಅವನು "ತನ್ನಷ್ಟಕ್ಕೆ ತಾನೇ ಅಗತ್ಯವಾಗಿರುವ ಅಸ್ತಿತ್ವವನ್ನು" ಎದುರಿಸಬೇಕಾದ ದಿನವನ್ನು ಕೇವಲ ಮುಂದೆ ಹಾಕುತ್ತಿದ್ದನು. ಅಂತಿಮವಾಗಿ, ಅವನು ಜೀವಿಯನ್ನು "ನಿಯಂತ್ರಿಸುವ ತತ್ವಕ್ಕೆ" ಕೆಳಗಿಳಿಸಿದಾಗ, ಅದು ಹೇಗೆ "ಸರ್ವ ಸಾಮರ್ಥ್ಯವುಳ್ಳ ಅಗತ್ಯವಾದ ಕಾರಣದೊಂದಿಗೆ" ಸಮಾಂತರವಾಗಿಡ ಬೇಕೆಂದು ಒಬ್ಬನು ಆಶ್ಚರ್ಯಪಡುತ್ತಾನೆ.

"ಯೋಚಿಸುವದರಲ್ಲಿ, ಮತ್ತು ನಂಬುವದರಲ್ಲಿ, ಮತ್ತು ಎಲ್ಲಾ ರೀತಿಯ ವಿಷಯಗಳನ್ನು ಕುರಿತು ವಿವೇಚಿಸುವದರಲ್ಲಿ, ಮತ್ತು ಭರವಸೆ ಹಾಗೂ ಭದ್ರತೆಯೊಂದಿಗೆ ಮೇಲಿಂದ ಮೇಲೆ ಒಪ್ಪಿಕೊಳ್ಳುವದರಿಂದ ... ನಿರ್ಬಂಧವಿಲ್ಲದ ಅಗತ್ಯತೆಯೊಳಗೆ ನಾವಿರುತ್ತೇವೆ" ಎಂದು ಹ್ಯೂಮ ಬರೆದನು.[19] ಹ್ಯೂಮನು ತನ್ನನ್ನು "ನಾಸ್ತಿಕನು" ಎಂದು ಕರೆದುಕೊಂಡರೂ, ಹಾಗೆ ಇರುವಂಥದ್ದು "ಉತ್ತಮ, ಸಂಚಿಗಸ್ಥ ಕ್ರೈಸ್ತನಾಗುವದಕ್ಕೆ ಮೊದಲಿನ ಮತ್ತು ಅಗತ್ಯವಾದ ಹೆಜ್ಜೆಯಾಗಿದೆ" ಎಂದು ಅವನು ಹೇಳಿದನು.[20] ಅಂಥ ಬುದ್ಧಿಶಕ್ತಿಯುಳ್ಳ ಮನಸ್ಸು, "ತಳದಲ್ಲಿ, ಮಾತಿನಲ್ಲಿ ತನ್ನನ್ನು ವ್ಯರ್ಥಪಡಿಸಿಕೊಂಡಿದೆ ಮತ್ತು ಯಾವುದೇ ಸ್ಪಷ್ಟವಾದ ನಿರ್ಧಾರವು ಒಪ್ಪಿಕೊಳ್ಳುವಿಕೆಯಿಲ್ಲ" ಎಂದೂ ಹೇಳಿದನು.[21] ಸಂಬಂಧಿಕವಾಗಿ ಯಾವುದೂ ಇಲ್ಲದ್ದರ ಬಗ್ಗೆ ಬಹಳ ಗೊಂದಲದ ನಂತರ, ಅವನು ಶುದ್ಧ ಧರ್ಮವು "ಜೀವನದಲ್ಲಿ ಮುಖ್ಯವಾದ, ಕೇವಲ ಮಹಾ ಆದರಣೆಯಾಗಿದೆ; ಮತ್ತು ದುರ್ದೈವದ ಎಲ್ಲಾ ದಾಳಿಗಳ ಮಧ್ಯದಲ್ಲಿ ನಮ್ಮ ಮುಖ್ಯ ಅಧಾರವಾಗಿದೆ. ಸೂಚಿಸಲು ಮಾನವ ಕಲ್ಪನೆ ಸಾಧ್ಯವಾದ, ಹೆಚ್ಚು ಒಪ್ಪಿಕೊಳ್ಳಬಹುದಾದ ಪ್ರತಿಬಿಂಬವು ಯಥಾರ್ಥವಾದ ಆಸ್ತಿಕತೆಯದಾಗಿರುತ್ತದೆ" ಎಂಬ ಹೇಳಿಕೆಗೆ ಅಂತಿಮವಾಗಿ ತಿರುಗಿಕೊಂಡನು.[22] ಹ್ಯೂಮನು ತನ್ನ ಸಂದೇಹವಾದಿತ್ವವನ್ನು ಇಟ್ಟುಕೊಂಡು ಹಾಸ್ಯಾಸ್ಪದವಾಗಿ ಬರೆಯುತ್ತಿದ್ದರೆ, ಅವನು ಅದನ್ನು ತೋರಿಸಲಿಲ್ಲ.

ಯಾವುದನ್ನು ಕಲ್ಪಿಸಿಕೊಳ್ಳಬೇಕು (ಏನೂ ಇಲ್ಲದ್ದರಿಂದ ಯಾವುದಾದರೊಂದು, ಎಂಬಂತೆ) ಎಂಬುದು ಅರ್ಥವಿಲ್ಲದ್ದಾಗಿದೆ. "*ಸಂಪೂರ್ಣವಾಗಿ ಅಗತ್ಯವಾಗಿರುವ* ಜೀವಿಯ ಬಗ್ಗೆ ಮಾತಾಡುವದನ್ನು" ಅವನು ಅಡ್ಡಿಮಾಡಿಸಿದಂತೆ ಹ್ಯೂಮನ ವಿವೇಚನೆಯನ್ನು ಇಮ್ಮಾನುವೇಲ ಕಾಂಟ ಅನುಸರಿಸಿದನು.[23]

ಅಂಥ ಒಂದು ವಾದದಲ್ಲಿ ತಪ್ಪಾಗಿ ನಡಿಸುವ ವಿಚಾರದೊಂದಿಗೆ ಕಾಂಟ ಉಳಿದುಕೊಳ್ಳಲಾರದವನಾಗಿದ್ದನು. ಮತ್ತು ಅನಂತರ - "ನಂಬಿಕೆಯಿಂದ"[24] - "ಮೂಲ ಜೀವಿಯನ್ನು" "ಆತನನ್ನು" ಸರ್ವಜ್ಞಾನಿಯೂ, ನ್ಯಾಯವಂತನು, ಸರ್ವಶಕ್ತನೂ, ಒಳ್ಳೆಯವನೂ, ನಿತ್ಯನೂ ಮತ್ತು ಸರ್ವವ್ಯಾಪಿಯೂ ಎಂದು ಉಲ್ಲೇಖಿಸಿದನು.[25]

ಹಾಗೆಯೇ, ಹ್ಯೂಮನು ಸಹಜವಾಗಿ ತನ್ನ ತಣ್ಣಗಾದ, ಕಟ್ಟುನಿಟ್ಟಿನ ವಿವೇಚನೆಯಿಂದ (ವ್ಯವಹಾರಿಕವಲ್ಲದ ಮತ್ತು ತಪ್ಪಾಗಿ ನಡಿಸುವ) ಅಭಿಪ್ರಾಯವು ತಪ್ಪೆಂದು ಒಪ್ಪಿಕೊಂಡನು. "ದೈವತ್ವದ ಸ್ವಾಭಾವಿಕ ಗುಣಲಕ್ಷಣಗಳನ್ನು ವ್ಯಂಗ್ಯವಿಲ್ಲದೇ ಒಪ್ಪಿಕೊಂಡನು,"[26] ಮತ್ತು "ನಮ್ಮ ವಿಶ್ವಾಸದ ದೈವಿಕ ಆಧಾರದ" ಬಗ್ಗೆ ಮಾತಾಡಿದನು.[27]

ವಾಲ್ಟರ ಕಾಫಮಾನ್, ಹ್ಯೂಮ ಮತ್ತು ಕಾಂಟ ಅವರು ಮೊದಲು ಉಪಯೋ

ಗಿಸಿದ ಖಂಡಿತವಾದ ವಿವೇಚನೆಯನ್ನು ಉಪಯೋಗಿಸಿದನು, "ಅಗತ್ಯವಾದ" ಎಂಬ ವಿಶೇಷಣವು "ಜೀವಿ" ಎಂಬ ನಾಮಪದವನ್ನು ಬದಲಾಯಿಸಲಾರದು, ಯಾಕಂದರೆ ಅಂಥದ್ದು "ಅಕ್ರಮವಾದ ಜೋಡಣೆ" ಆಗುವುದೆಂದು ಒಪ್ಪಿಕೊಂಡರು, ಹೀಗಿದ್ದರೂ ಅನಂತರದಲ್ಲಿ ಹ್ಯೂಮನು ಅಂಥ ವಿವೇಚನೆಯನ್ನು "ಸಂಪೂರ್ಣವಾಗಿ ಬಾಯ್ದೆರೆಯಾದದ್ದು"[28] ಎಂದು ಅನಂತರದಲ್ಲಿ ಉಲ್ಲೇಖಿಸಿದನೆಂದು ತೋರಿಸುವಲ್ಲಿ ಸೋತುಹೋದನು ಮತ್ತು ಕಾಂಟನು ದೇವರನ್ನು ಗುರುತಿಸುತ್ತಾ ಹೋದನು, ಅದನ್ನು ಮಾಡಲು ಕೌಫಮಾನ ನಿರಾಕರಿಸಿದನು.[29]

"ಭಾವನೆಯ ಜಗತ್ತಿನಲ್ಲಿ ಬಿಟ್ಟರೆ ... ಕಾರ್ಯಕಾರಣದ ತತ್ವಕ್ಕೆ ಅರ್ಥವಿಲ್ಲ" ಎಂದೂ ಸಹ ಕಾಂಟ ವಾದಿಸಿದನು.[30] ನಾವು ನಿಶ್ಚಯವಾಗಿ ಅಲ್ಲಿಯೇ ಇರುವೆವು, ಮತ್ತು ಭಾವನೆಯ ಜಗತ್ತಿಗಾಗಿ ಲೆಕ್ಕಹಾಕಲು ಕಾರ್ಯಕಾರಣ ತತ್ವವನ್ನು ಕರೆಯುತ್ತಿರುವೆವು. "ಇಡೀ ವಿಶ್ವೋತ್ಪತ್ತಿ ಶಾಸ್ತ್ರದ ರುಜುವಾತಿನ ಅಂತಿಮ ಬಲವು ಕೇವಲ ತತ್ವಗಳ ವಾಸ್ತವಿಕತೆಯ ರುಜುವಾತಿನ ಮೇಲೆ ನಿಂತಿರುವುದು"[31] ಎಂದು ಅವನು ಬರೆದನು, ಯಾಕಂದರೆ "ಸಂಪೂರ್ಣವಾಗಿ ಅಗತ್ಯವಾಗಿರುವ ಜೀವಿಯ ಸಾಧ್ಯತೆಯ ಶರತ್ತುಗಳನ್ನು ಒಳಗೊಂಡಿರುವ," "ಶುದ್ಧವಾದ ತತ್ವಗಳನ್ನು" ಹುಡುಕುವದಕ್ಕೆ ಅನುಭವವನ್ನು ತಿರಸ್ಕರಿಸಬೇಕಾಗುತ್ತದೆ.

ಆಗ, "ವಿಶ್ವ ಸ್ಥಾಪನೆ ಸಿದ್ಧಾಂತದಲ್ಲಿ ಅಡಗಿರುವ" ಕಲ್ಪನೆಗಳ "ಇಡೀ ಗೂಡಿನಲ್ಲಿ" ಪ್ರಕಟಿಸಲು ಕ್ರಮಬದ್ಧವಾಗಿ ಕಾಂಟನು ಪ್ರಯತ್ನಿಸಿದ ನಂತರ, ಅವನು ತನ್ನ ಮನಸ್ಸನ್ನು ಬದಲಾಯಿಸಿದನೆಂದು ತೋರುತ್ತದೆ. "ಎಲ್ಲಾ ಸಾಧ್ಯವಾದ ಕಾರಣದಂತೆ ಸೇವೆಮಾಡಲು ಸಂಪೂರ್ಣವಾಗಿ ಸಾಕಷ್ಟಾಗಿರುವ ಜೀವಿಯ ಅಸ್ತಿತ್ವನ್ನು ಒಪ್ಪಿಕೊಳ್ಳಲು ಬಿಡಬಹುದು" ಎಂದು ಅವನು ಹೇಳಿದನು.[32]

## ಮುಕ್ತಾಯ

ಚಂದ್ರನ ಅಸ್ತಿತ್ವವು ನಿರ್ಮಾಣಿಕನ ಕಡೆಗೆ ತೋರಿಸುತ್ತದೆ, ಮತ್ತು ಚಂದ್ರನ ಚಲನವಲನವು ಚಲಿಸುವಾತನ ಕಡೆಗೆ ತೋರಿಸುತ್ತದೆ ಎಂಬುದು ನಿರ್ಣಯವಾಗಿದೆ. ಈ ನಿರ್ಮಾಣಿಕನು ಚಲಿಸುವಂತೆ ಮಾಡುವಾತನು/ಸ್ವತಂತ್ರನೂ ನಿತ್ಯನೂ ಆಗಿದ್ದಾನೆ ಎಂದು ತರ್ಕಶಾಸ್ತ್ರವು ಹೇಳುತ್ತದೆ.

---

ಟಿಪ್ಪಣಿಗಳು

[1]ಸಾಮಾನ್ಯವಾಗಿ ಈ ವಿವೇಚನೆಯು "the cosmological argument" ಎಂದು ಕರೆಯಲ್ಪಟ್ಟಿದೆ ಆದರೆ ಅದರ ಒಳಗಿರುವಂಥದ್ದು ಅದನ್ನು "the argument from cause" ಎಂದು ಕರೆಯಬೇಕೆಂದು ಕೇಳುತ್ತದೆ. "Cosmological" ಎಂಬ ಪದದ ಅರ್ಥವು ಕ್ರಮಕ್ಕೆ ಸಂಬಂಧಿಸಿ, ಕಾರಣದಿಂದ ಎಂಬ ವಾದಕ್ಕೆ ಸರಿಯಾಗಿ ಹೊಂದಿಕೊಳ್ಳುವದಿಲ್ಲ. "Cosmological" ಎಂಬ ಪದವು *kosmeo* ಎಂಬದರಿಂದ ಬಂದಿದ್ದು ಅದರ ಅರ್ಥ "ಏರ್ಪಡಿಸಲಿಕ್ಕೆ, ಕ್ರಮಪಡಿಸಲಿಕ್ಕೆ" ಎಂದಾಗುತ್ತದೆ. ದೇವರ ಅಸ್ತಿತ್ವಕ್ಕಾಗಿ ಬಲವಾದ ವಾದವು ವಿಶ್ವದ ಕ್ರಮಪ್ರಕಾರದ ಕ್ರಮ ಪಡಿಸುವಿಕೆಯಲ್ಲಿ ಕಂಡು ಬರುತ್ತದೆ, ಆದರೆ ಅದು ಕಾರ್ಯಕಾರಣದ ವಾದವಾಗಿರುವದಿಲ್ಲ. [2]Plato, *The Works of Plato,* Book X, *Laws,* trans. B. Jowett (New York: Dial Press, n.d.), 453. [3]Joseph Addison, "The Spacious Firmament on High," *Songs of Faith and Praise,* comp. and ed. Alton H. Howard (West Monroe,

La.: Howard Publishing Co., 1994). [4]G. R. G. Mure, ed., *Aristotle* (New York: Oxford University Press, 1964), 173. [5]James Oliver Buswell Jr., *A Systematic Theology of the Christian Religion* (Grand Rapids, Mich: Zondervan Publishing House, 1962), 1:82. [6]Ibid., 1:84. [7]Ibid., 1:85. [8]David Hume, "An Enquiry Concerning Human Understanding," in *Hume Selections,* ed. Charles W. Hendel Jr. (New York: Charles Scribner's Sons, 1955), 191, 192n. [9]Hume, "The Dialogues Concerning Natural Religion," in *Selections*, 385. [10]James Beattie, *An Essay on the Nature and Immutability of Truth: in Opposition to Sophistry and Scepticism* (Edinburgh, Scotland: A. Kincaid and J. Bell, 1770), 111.

[11]David Hume, "An Abstract of a Treatise of Human Nature," in *An Enquiry Concerning Human Understanding,* ed. Charles W. Hendel Jr. (Indianapolis: Liberal Arts Press Division of the Bobbs-Merrill Co., 1955), 188. [12]Hume, "The Treatise of Human Nature," in *Selections*, 29. [13]Hume, "Enquiry," 192. [14]Plato, *Plato Selections,* ed. Raphael Demos (New York: Charles Scribner's Sons, 1927), 429-30. [15]Aristotle, *Metaphysics*, quoted in John Hick, ed., *Classical and Contemporary Readings in the Philisophy of Religion* (Englewood Cliffs, N.J.: Prentice-Hall, 1965), 467. [16]Hume, "Abstract" 198. [17]Hume, "Dialogues," 304. [18]Immanuel Kant, *Kant Selections*, ed. Theodore Meyer Greene (New York: Charles Scribner's Sons, 1957), 258. [19]Hume, "Dialogues," 390n. [20]Ibid., 401.

[21]Ibid., 390n. [22]Ibid., 397. [23]Immanuel Kant, "Critique of Pure Reason," in *Kant Selections,* ed. Theodore Meyer Greene (New York: Charles Scribner's Sons, 1957), 244. (Emphasis his.) [24]Immanuel Kant, "Critique of Judgement," in *Kant Selections*, ed. Theodore Meyer Greene (New York: Charles Scribner's Sons, 1957), 525. [25]Ibid., 509. [26]Hume, "Dialogues," 390. [27]Ibid., 401. [28]Ibid., 390n. [29]Walter Kaufmann, *Critique of Religion and Philosophy* (New York: Harper & Bros., 1958), 111. [30]Kant, "Critique of Pure Reason," 255.

[31]Ibid., 254. ಈ ಪುಟದ 1ರಲ್ಲಿ cosmological ವಾದದ ಚರ್ಚೆಯನ್ನು ನೋಡಿರಿ. ontological ವಾದವು ಅಸ್ತಿತ್ವದ ಪ್ರಶ್ನೆಗೆ ಸಂಬಂಧಿಸಿರುತ್ತದೆ. ಕ್ಯಾಂಟರ್‌ಬರಿಯ ಅನ್ಸೆಲ್ಮನ ಯೋಚನೆಯ ಪ್ರಕಾರ ಅಸ್ತಿತ್ವದಲ್ಲಿ ಇರದೇ ಇರುವ ಜೀವಿಯ ಬಗ್ಗೆ ಅರಿತುಕೊಳ್ಳುವುದು ಅಸಾಧ್ಯವಾದದ್ದಾಗಿದೆ. ಆದುದರಿಂದ ದೇವರು ಅಸ್ತಿತ್ವದಲ್ಲಿ ಇರುತ್ತಾನೆ. [32]Ibid., 255.

© 2009 Truth for Today